ದಡಾರನೆ ಕುರ್ಚಿಯನ್ನು ನೂಕಿದರು. ಪುಣ್ಯಕ್ಕೆ ಶ್ರೀನಿವಾಸ ರಾಯರು ಅವರ ಎರಡೂ ಕಾಲುಗಳನ್ನ ಆಕೆ ನೂಕಿದ ದಿಕ್ಕಿಗೆ ವಿರುದ್ಧವಾಗಿ ಗಟ್ಟಿಯಾಗಿ ನೆಲ ಹಿಡಿದಿದ್ದರಿಂದ ಬಿದ್ದುಬಿಡಲಿಲ್ಲ. ಆದರೂ ಟೇಬಲ್ಲು ಅಲುಗಾಡಿ ಅದರ ಮೇಲಿದ್ದ ಮಾಣಿ ತಂದಿಟ್ಟ ನೀರಿನ ಲೋಟ ಅಲುಗಾಡಿ ನೀರೆಲ್ಲ ರಾಯರ ಪ್ಯಾಂಟಿನ ಮೇಲೆ ಚೆಲ್ಲಿದ್ದಲ್ಲದೇ ರಾಯರ ಕುರ್ಚಿ ಪೆಂಡುಲಮ್‌ನ ತರಹ ಆ ಕಡೆಯಿಂದ ಈ ಕಡೆ, ಈ ಕಡೆಯಿಂದ ಆ ಕಡೆ ವಾಲಿತು. ಅನಿರೀಕ್ಷಿತವಾಗಿ ಆದ ಈ ಸಂಗತಿಯಿಂದ ರಾಯರು ವಿಚಲಿತರಾಗಿ 'ಅಯ್ಯಯ್ಯೋ' ಅಂತ ಕೂಗಿ ಕುರ್ಚಿ ಬೀಳೋದು ತಡೆದು ದಡ್ ಅಂತ ಕುಕ್ಕರಿಸಿದರು. ಹಾಗೂ ಹೀಗೂ ಸಾವರಿಸಿಕೊಂಡ ರಾಯರು ಕಡೆಗೆ 'ಏನು ತಿಂತೀಯಾ ಹೇಳು' ಅಂದರೆ ಆಕೆ 'ಚೌಚೌ ಬಾತ್' ಅಂದಳು. ಪುಣ್ಯಕ್ಕೆ ಅದು ಇದ್ದಿದ್ದರಿಂದ ರಾಯರಿಗದು ಇಷ್ಟವಿಲ್ಲದಿದ್ದರೂ ಆರ್ಡರ್ ಮಾಡಬೇಕಾಗಿ ಬಂತು.

ವೇಯ್ಟರ್ ತಂದಿಟ್ಟ ಚೌಚೌ ಬಾತ್ ನೋಡಿ ಆಕೆ 'ಇದೇನ್ರೀ, ಹೀಗಿದೆ! ಹಳದಿ, ಹಳದಿ ಆಗಿದೆಯಲ್ರೀ ಉಪ್ಪಿಟ್ಟೂ' ಅಂದರು.

'ಹಳದೀ ಹಳದೀ' ಅಂದಿದ್ದು ರಾಯರಿಗೆ ಇನ್ನೇನೋ ನೆನಪಿಗೆ ತಂದು ಅದನ್ನು ನೋಡಿದರೆ ವಾಂತಿ ಬರುವ ಹಾಗಾಯಿತು. ಅದೂ ಸಾಲದು ಅಂತ ಆಕೆ ತಿಂತಾ, ತಿಂತಾ, ಎರಡು ಬಾರಿ ಚಮಚದಿಂದ ಟೇಬಲ್ಲಿನ ಮೇಲೆ ಬೀಳಿಸಿಕೊಂಡು, ಅದು ಸರ್ವೇ ಸಾಮಾನ್ಯ, ಏನು ಆಗೇ ಇಲ್ಲವೇನೋ ಅನ್ನೋ ತರಹ ಅದನ್ನು ಸ್ಪೂನಿನಲ್ಲಿ ಹಿಡಿದೆತ್ತಿ ಮತ್ತೆ ಪ್ಲೇಟಿಗೆ ಹಾಕಿಕೊಂಡು 'ಏನೇ ಆದರೂ ತಿನ್ನೋ ಪದಾರ್ಥ ವೇಸ್ಟ್‌ಮಾಡಬಾರದು ಅಂತ ನಮ್ಮ ತಂದೆ ಹೇಳಿಕೊಟ್ಟಿದಾರೆ. ಅದು ದೇವರ ತರಹ ಅಂತೆ' ಅಂದಿದ್ದು ಕೇಳಿ ರಾಯರಿಗೆ ಆತ ಏನಾದರೂ ಬದುಕಿದ್ದರೆ ಹೋಗಿ ನಾಕು ರಾಚಿಬಿಡುತ್ತಿದ್ದರೇನೋ. ಬದಲಾಗಿ, 'ನಿಜ, ನಿಜ' ಅಂದು ಮಾತು ಬದಲಾಯಿಸಿದರು. ನಂತರದಲ್ಲಿ ಆಕೆಯನ್ನ ಮನೆಗೆ ಬಿಡೋವರೆಗೂ 'ಹಳದೀ ಹಳದೀ' ಅನ್ನೋ ಪದ ಅವರ ತಲೇನ ಕೊರೀತಿದ್ದು ಹೋಟೆಲಿನ ವೇಯ್ಟರ್ ಬಾತ್‌ನ ಬದಲಿಗೆ ಮತ್ತಿನ್ನೇನೋ ಹಳದೀ ಪದಾರ್ಥ ತಂದಿಟ್ಟಿದ್ದು ಅದನ್ನ ಟೇಬಲ್ಲಿನ ಮೇಲೆಲ್ಲ ಬೀಳಿಸಿ ಅದನ್ನೇ ತಾವು ತಿನ್ನುತ್ತಿದ್ದ ಸ್ಪೂನಿನಿಂದಲೇ ಎತ್ತಿ ವಾಪಸ್ಸು ಹಾಕಿಕೊಂಡ ಅನುಭವ ಮರುಕಳಿಸಿ ಮತ್ತೊಮ್ಮೆ ವಾಂತಿ ಬರೋ ಹಾಗಾಯಿತು. ಇದರ ಮಧ್ಯೆ ಆಕೆ ಆಗಾಗ್ಗೆ ತನ್ನ ಮುಂಗುರುಳಿನ ಕೂದಲನ್ನ ಎಳೆದೆಳೆದುಕೊಂಡು ಬಾಯಿಗೆ ಇಟ್ಟುಕೊಳ್ಳುವುದನ್ನ ನೋಡಿದಾಗಲಂತೂ ರಾಯರಿಗೆ ಹೇಗೆ ರಿಯಾಕ್ಟ್ ಮಾಡುವುದೋ ತಿಳಿಯಲೇ ಇಲ್ಲ. ಅವರಿಗೆ ಮೊದಲಿನಿಂದಲೂ ಏನಾದರೂ ಬಾಯಿಗೆ ಕೈ ತಗಲಿದರೆ ಅದು ಎಂಜಲು, ತಕ್ಷಣ ಕೈ ತೊಳೆಯಬೇಕು ಎನ್ನುವುದು ಅಭ್ಯಾಸವಾಗಿದ್ದು ಈಗ ಕಸಿವಿಸಿ ಆಯಿತು. ಇತ್ತೀಚೆಗೆ ರಿಲೀಸ್ ಆದ ಯಾವುದೋ ಮನೆಹಾಳ ಸಿನಿಮಾದ ಹೀರೋಯಿನ್ ಈ ತರಹ ಮಾಡ್ತಾಳೋ ಏನೋ ಕಳ್ಳಮುಂಡೆ ಅಂತ ಆ ಕಾಣದ ಹೀರೋಯಿನ್‌ಗೆ ಶಾಪ ಹಾಕಿದರು.

ಶ್ರೀನಿವಾಸರಾಯರಿಗೆ ಅಹಲ್ಯಬಾಯಿಯವರ ಈ ವರ್ತನೆಯನ್ನ ಹೇಗೆ ಅರ್ಥೈಸಿಕೊಳ್ಳುವುದೋ ತಿಳಿಯದೇ ಹೋಗಿ ಕಡೆಕಡೆಗೆ ಈ ಮದುವೆ ಪೂರ್ತಿ ಕ್ಯಾನ್ಸಲ್ ಮಾಡಿಬಿಡೋದೇ ಅಥವಾ ಕಮ್ಮಿ ಅಂದರೆ ಸದ್ಯಕ್ಕೆ ಮುಂದೆ ಹಾಕುವುದೇ ಅಂತಲೂ ಯೋಚಿಸಿದರು. ಆದರೆ ಈ ಸುಳಿವರಿತ ಹಿರಿಯರು, ಈ ಸಂಬಂಧ ಕುದುರಿಸಲು ಓಡಾಡಿದವರು ಈ ರೀತಿ ಮದುವೆ ಬಿದ್ದು ಹೋದರೆ ಅವಳಿಗೇನು ಗತಿ, ಏನಾದರೂ ಹೆಚ್ಚು ಕಡಿಮೆ ಮಾಡಿಕೊಂಡರೆ ಪೊಲೀಸು, ಕೋರ್ಟು, ಕಚೇರಿ ಅಂತೆಲ್ಲ ಹೆದರಿಸಿ, ಸಾಮ ಭೇದ ಎಲ್ಲ